**ದಿನಾಂಕ 21.08.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀಸವಾಲುಃ ಶ್ರೀ ಎಸ್.ವಿ.ಎಂ. ವಕೀಲರಿಂದಃ</u>**

1. ವಾದಿ ಹನುಮಂತರಾಯಪ್ಪ ನನ್ನ ದೊಡ್ಡಪ್ಪ. ನಾನು ಮೊದಲು ಶಿರಾದಲ್ಲಿ ವಾಸವಾಗಿದ್ದು, ಈಗ 9 ವರ್ಷಗಳಿಂದ ತುಮಕೂರಿನಲ್ಲಿ ನನ್ನ ಸ್ವಂತ ಮನೆಯಲ್ಲಿ ವಾಸವಾಗಿದ್ದೇನೆ. ಸದರಿ ಮನೆಯು ನನ್ನ ಮಗನ ಹೆಸರಿನಲ್ಲಿ ಇದೆ. ನನ್ನ ಮಗ ಖಾಸಗಿ ಹೈಸ್ಕೂಲ್ ಕ್ಲರ್ಕ್ ಆಗಿ 2009 ರಿಂದಲೂ ಕೆಲಸ ಮಾಡುತ್ತಿದ್ದಾನೆ. ನನ್ನ ಮಗನನ್ನು ಕೆಲಸದಿಂದ ತೆಗೆದು ಹಾಕಿದ್ದು, ನ್ಯಾಯಾಲಯದ ಆದೇಶದಿಂದ ಪುನಃ ಒಂದು ವರ್ಷದಿಂದ ಕೆಲಸಕ್ಕೆ ಹೋಗುತ್ತಿದ್ದಾನೆ ಎಂದರೆ ಸರಿ. ನನ್ನ ಮಗನಿಗೆ ಬೇರೆ ಕೆಲಸ ಇಲ್ಲ ಎಂದರೆ ಸಾಕ್ಷಿಯು ನನ್ನ ಸೊಸೆ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡುತ್ತಿದ್ದಾಳೆ.
2. ತುಮಕೂರಿನಲ್ಲಿ ಇರುವ ಮನೆಯನ್ನು ನಿವೇಶನೆಯನ್ನು ಖರೀದಿ ಮಾಡಿ ಮನೆಯನ್ನು ಕಟ್ಟಿರುತ್ತೇವೆ. ಸದರಿ ನಿವೇಶನವನ್ನು ಸುಮಾರು 17 ವರ್ಷಗಳ ಹಿಂದೆ ಖರೀದಿ ಮಾಡಿರುತ್ತೇವೆ. ನಾನು ಮತ್ತು ನನ್ನ ಗಂಡ ನಿವೃತ್ತ ಸರ್ಕಾರಿ ನೌಕರರು. ನಾನು ನಿವೃತ್ತಿಯನ್ನು ಹೊಂದಿ 9 ವರ್ಷ ಆಗಿದೆ ಮತ್ತು ನನ್ನ ಗಂಡ ನಿವೃತ್ತಿ ಹೊಂದಿ 19 ವರ್ಷ ಆಗಿದೆ. ತುಮಕೂರಿನಲ್ಲಿ ಇರುವ ನಿವೇಶನವನ್ನು ನಾನು ಮತ್ತು ನನ್ನ ಗಂಡ ನನ್ನ ಗಂಡನ ಹೆಸರಿನಲ್ಲಿಯೇ ಖರೀದಿ ಮಾಡಿರುತ್ತೇನೆ. ನಂತರ ನಿವೃತ್ತಿ ಹೊಂದಿದ ನಂತರ ನನ್ನ ಗಂಡ ಸದರಿ ನಿವೇಶನದಲ್ಲಿ ಮನೆಯನ್ನು ಕಟ್ಟಿಸಿದ್ದು, ಹಣದ ತಾಪತ್ರಯವಾದ ಕಾರಣ ಮನೆಯನ್ನು ಮಾರಾಟ ಮಾಡುವ ಸಮಯದಲ್ಲಿ ನನ್ನ ಸೊಸೆ ದುಡ್ಡು ಕೊಡುವುದಾಗಿ ಹೇಳಿದ್ದು, ಆದಕಾರಣ ನನ್ನ ಗಂಡ ನನ್ನ ಸೊಸೆ ಮತ್ತು ಮಗನಿಗೆ ಮಾರಾಟ ಮಾಡಿರುತ್ತಾರೆ.
3. ಮನೆಯನ್ನು ಕಟ್ಟಲು ನನ್ನ ಗಂಡನಿಗೆ ಇಲಾಖೆಯ ವತಿಯಿಂದ ಪಡೆಯುವಷ್ಟರಲ್ಲಿ ನಿವೃತ್ತಿಯನ್ನು ಹೊಂದಿದ್ದರು ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಹಣದಿಂದಲೇ ನಿವೇಶವನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮನೆಯನ್ನೂ ಸಹ ಒಟ್ಟು ಕುಟುಂಬದ ಆದಾಯದಿಂದಲೇ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ನನ್ನ ಗಂಡ ನಿವೃತ್ತಿಯಾದ ನಂತರ ಸಾಲ ಮಾಡಿ ಕಟ್ಟಿಸಿರುತ್ತೇವೆ ಎಂದು ನುಡಿಯುತ್ತಾರೆ. ಸಾಲ ಪಡೆದಿರುವ ಬಗ್ಗೆ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ಕೆನರಾ ಬ್ಯಾಂಕಿನಲ್ಲಿ, ಕೆ.ಜಿ.ಐ.ಡಿ ಮತ್ತು ಇತರೆ ಕಡೆ ಸಾಲವನ್ನು ಪಡೆದುಕೊಂಡಿದ್ದೆವು. ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅದನ್ನು ಹುಡುಕಬೇಕು ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ಹೇಳಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ನನ್ನ ಗಂಡನಿಗೆ 80 ವರ್ಷ ವಯಸ್ಸಾಗಿದ್ದು, ವಯೋಸಹಜ ಖಾಯಿಲೆಯಿಂದ ಬಳಲುತ್ತಿರುವ ಕಾರಣ ನಾನೇ ಸಾಕ್ಷಿ ಹೇಳಲು ಬಂದಿದ್ದೇನೆ ಎಂದು ನುಡಿಯುತ್ತಾರೆ. ಅದರ ಬಗ್ಗೆ ದಾಖಲಾತಿಗಳು ಇಲ್ಲ.

4. ಶಿರಾ ಜ್ಯೋತಿನಗರದಲ್ಲಿ ಮನೆ ಇದೆ ಎಂದರೆ ಸಾಕ್ಷಿಯು ಇತ್ತು, ಆದರೆ ಅದನ್ನು ಸುಮಾರು 2004-05 ರಲ್ಲಿ ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಶಿರಾದಲ್ಲಿ ಇರುವ ಮನೆಯನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದರೆ ಸರಿಯಲ್ಲ. ಶಿರಾದಲ್ಲಿ ಇರುವ ಮನೆಯನ್ನು 1998 ರಲ್ಲಿ ಖರೀದಿ ಮಾಡಲು ನಾನು ಅಥವಾ ನನ್ನ ಗಂಡ ಇಲಾಖೆಯಿಂದ ಅನುಮತಿಯನ್ನು ಪಡೆದಿದ್ದೀರಾ ಎಂದರೆ ಸಾಕ್ಷಿಯು ನಾವು ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದು, ನಮಗೆ ಯಾವುದೇ ಅನುಮತಿಯನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ದಾವೆಯನ್ನು ಹಾಕಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ದಾವೆಯನ್ನು ನಾನೇ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಾನು ದಾವೆಯನ್ನು ಹಾಕಲು ಜಿ.ಪಿ.ಎ. ಹೋಲ್ಡರ್ ಆಗಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನನ್ನ ಗಂಡ ವಯೋಸಹಜ ಖಾಯಿಲೆಯಿಂದ ಬಳಲುತ್ತಿದ್ದ ಕಾರಣ ನಾನೇ ಸಾಕ್ಷಿ ನುಡಿಯಲು ಹಾಜರಿದ್ದೇನೆ ಎಂದು ನುಡಿಯುತ್ತಾರೆ.

5. ನಮ್ಮ ವಿವಾಹವು 1972 ರಲ್ಲಿ ಆಗಿರುತ್ತದೆ. ನನ್ನ ಗಂಡನ ಮನೆಯವರು ಮತ್ತು ನಮ್ಮ ಮನೆಯವರಿಗೂ ಹೊಸ ಸಂಬಂಧ ಎಂದರೆ ಸರಿ. ನನ್ನ ಗಂಡನ ಊರಾದ ಬನದಕುಂಟೆಯ ಗ್ರಾಮದಲ್ಲಿ ನಮಗೆ ಯಾರೂ ಸಂಬಂಧಿಕರು ಇಲ್ಲ. ನನ್ನ ತಂದೆಯ ಊರು ಶಿರಾ. ನಾನು ಮದುವೆಯಾಗುವ ಮೊದಲು ನನ್ನ ಗಂಡನ ಮನೆಯ ವ್ಯವಹಾರದ ಬಗ್ಗೆ ನನಗೆ ಮಾಹಿತಿ

ಇರಲಿಲ್ಲ ಎಂದರೆ ಸಾಕ್ಷಿಯು ಮಾಹಿತಿ ಇರಲಿಲ್ಲ, ಮದುವೆಯಾದ ನಂತರ ತಿಳಿದುಬಂದಿದೆ ಎಂದು ನುಡಿಯುತ್ತಾರೆ. ನಾನು ಮದುವೆಯ ಸಮಯದಲ್ಲಿ 10 ನೇ ತರಗತಿಯನ್ನು ಹಾಗೂ ಟಿ.ಸಿ.ಹಚ್. ನ್ನು ಮಾಡಿಕೊಂಡು ನಂತರ ಕೆಲಸಕ್ಕೆ ಸೇರಿಕೊಂಡು ಬಿ.ಎ. ಮತ್ತು ಬಿ.ಎಡ್ ಮಾಡಿರುತ್ತೇನೆ. ನನ್ನ ಗಂಡ ಬಿ.ಕಾಂ ವ್ಯಾಸಾಂಗವನ್ನು ಅಪೂರ್ಣ ಮಾಡಿದ್ದು, ಮದುವೆಯಾದ ನಂತರ ಚಿಕ್ಕನಹಳ್ಳಿಯಲ್ಲಿ ಟಿ.ಸಿ.ಹಚ್. ಮಾಡಿರುತ್ತಾರೆ. ಮದುವೆಯಾದ ನಂತರ ಗಂಡನ ಮನೆಯಲ್ಲಿ ನಾನು ಮತ್ತು ನನ್ನ ಗಂಡ, ನನ್ನ ಗಂಡನ ಅಣ್ಣ ತಮ್ಮಂದಿರು, ನನ್ನ ಮಾವ ಮತ್ತು ಅವರ ಅಕ್ಕ ಕೆಂಚಮ್ಮ ಮತ್ತು ನನ್ನ ನಾದುನಿಯರು ವಾಸವಾಗಿದ್ದೆವು. ಮದುವೆಯಾಗಿ ಕೆಲಸಕ್ಕೆ ಸೇರಿದ ನಂತರವೂ ನಾವು ಒಟ್ಟು ಕುಟುಂಬದಲ್ಲಿ ಇದ್ದೆವು.

6. ಮದುವೆಯಾದ 10 ವರ್ಷದ ನಂತರ ನನಗೂ ಮತ್ತು ನನ್ನ ಗಂಡನಿಗೆ ಸರ್ಕಾರಿ ಕೆಲಸ ಸಿಕ್ಕಿರುತ್ತದೆ. ನನ್ನ ವಿದ್ಯಾಭ್ಯಾಸದ ಖರ್ಚನ್ನು ನನ್ನ ಮಾವ ದಾಸಪ್ಪನವರೇ ಭರಿಸಿರುತ್ತಾರೆ ಎಂದರೆ ಸರಿಯಲ್ಲ, ನನ್ನ ತಂದೆಯೇ ನನ್ನ ವಿದ್ಯಾಭ್ಯಾಸದ ಖರ್ಚನ್ನು ಮಾಡಿರುತ್ತಾರೆ. ನಮಗೆ ಉದ್ಯೋಗ ದೊರಕಿದ ನಂತರ ಕೆಲಸ ಮಾಡುವ ಸ್ಥಳದಲ್ಲಿಯೇ ವಾಸವಾಗಿದ್ದು, ವಾರಕ್ಕೊಮ್ಮೆ ಊರಿಗೆ ಬಂದು ಹೋಗಿ ಮಾಡುತ್ತಿದ್ದೆವು. ನನ್ನ ಮಾವ ದಾಸಪ್ಪನಿಗೆ ಎಷ್ಟು ಆಸ್ತಿ ಪಿತ್ರಾರ್ಜಿತವಾಗಿ ಬಂದಿತ್ತು ಎಂದರೆ ಸಾಕ್ಷಿಯು 9-10 ಎಕರೆ ಆಸ್ತಿಗಳು ಬಂದಿದೆ. ಅದರ ಸರ್ವೆ ನಂಬರ್ ಗಳು ಜಾಸ್ತಿ ಇರುವ ಕಾರಣ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ಗಳಲ್ಲಿ ಎಷ್ಟು ವಿಸ್ತೀರ್ಣಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಬತ್ತ, ಸೌತೇಕಾಯಿ, ಕಾಳುಗಳು ಮುಂತಾದ ಬೆಳೆಗಳು ಬೆಳೆಯುತ್ತಿದ್ದವು. ಯಾವ ಸರ್ವೆ ನಂಬರ್ ನಲ್ಲಿ ಯಾವೆಲ್ಲಾ ಬೆಳೆಗಳು ಬೆಳೆಯುತ್ತಿದ್ದರು ಎಂದು ನನಗೆ ಹೇಳಲು ಸಾಧ್ಯವಿಲ್ಲ.

7. ಪಿತ್ರಾರ್ಜಿತವಾಗಿ ಬಂದ ಆಸ್ತಿಯಲ್ಲಿ ವಾಸದ ಮನೆಯು 3 ಇದ್ದು, ಒಂದು ಫ್ಲೋರ್ ಮಿಲ್ ಇತ್ತು, ಸದರಿ ಫ್ಲೋರ್ ಮಿಲ್ ಈಗ ಖಾಲಿ ಇದೆ. ಸದರಿ ಮನೆಗಳ ಖಾತೆ ಹೇಳಲು ಸಾಧ್ಯವಿಲ್ಲ. ಸದರಿ ಮೂರು ಮನೆಯಲ್ಲಿ ಯಾರೆಲ್ಲಾ ವಾಸವಾಗಿದ್ದರು ಎಂದರೆ ಸಾಕ್ಷಿಯು ಹಳೆ ಮನೆಯಲ್ಲಿ ಎಲ್ಲರೂ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೆವು, ಅದರ ಖಾತೆ ನಂಬರ್ ನನಗೆ

ಗೊತ್ತಿಲ್ಲ. ನನ್ನ ಮಾವ ದಾಸಪ್ಪನಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು ಇದ್ದರು ಎಂದರೆ ಸಾಕ್ಷಿಯು 5-6 ಜನ ಇದ್ದರು ಎಂದು ಹೇಳುತ್ತಿದ್ದರು, ಅವರುಗಳ ಬಗ್ಗೆ ಅಷ್ಟಾಗಿ ಪರಿಚಯ ಇಲ್ಲ. ನನ್ನ ಮಾವ ದಾಸಪ್ಪನ ತಂದೆಯ ಹೆಸರು ಗೋಪಾಲೆಗೌಡ ಎಂದರ ಸರಿ. ನನ್ನ ಮಾವ ದಾಸಪ್ಪನ ಅಣ್ಣ ತಮ್ಮಂದಿರು ಯಾವ ವರ್ಷದಲ್ಲಿ ಭಾಗವಾಗಿದ್ದಾರೆ ಮತ್ತು ಸದರಿಯವರಿಗೆ ಎಷ್ಟು ಆಸ್ತಿಗಳು ಭಾಗದಲ್ಲಿ ಹೋಗಿದೆ ಎಂದರೆ ಸಾಕ್ಷಿಯು ನಾನು ಮದುವೆಯಾಗುವ ಕಾಲಕ್ಕೆ ಎಲ್ಲರೂ ಭಾಗವನ್ನು ಮಾಡಿಕೊಂಡ ಕಾರಣ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

8. ನನ್ನ ಮಾವ ದಾಸಪ್ಪನಿಗೆ 3 ಜನ ಹೆಣ್ಣು ಮಕ್ಕಳು ಮತ್ತು 3 ಜನ ಗಂಡು ಮಕ್ಕಳು. ಅವರುಗಳೆಂದರೆ ಮಹಲಿಂಗಪ್ಪ, ರಂಗಪ್ಪ, ಬಾರಮ್ಮ, ಲಕ್ಷ್ಮಮ್ಮ, ಹನುಮಂತರಾಯಪ್ಪ ಮತ್ತು ಕೆಂಚಮ್ಮ. ನನ್ನ ಮದುವೆಯಾಗುವ ಕಾಲಕ್ಕೆ ಹೆಣ್ಣುಮಕ್ಕಳ ಮದುವೆಯಾಗಿತ್ತು ಎಂದರೆ ಸರಿ.

ಮುಂದುವರೆದ ಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**